1.
2.
3.
4.
5. .

**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿದಾರರನ್ನು ಪುನಃ ಕರೆಯಿಸಿ ದಿನಾಂಕಃ 03.09.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ.ಡಿ.ಎಂ ವಕೀಲರಿಂದ:**

6. ನಾನು ಎಸ್.ಎಸ್.ಎಲ್.ಸಿ ವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1ನೇ ಆರೋಪಿ ಮತ್ತು ನಾನು ಸ್ನೇಹಿತರು. ಚಾಸಾ- 8 ಗುರುಮೂರ್ತಿ ನಮ್ಮ ಊರಿನವರು. ಚಾಸಾ- 8 ರವರಿಗೆ ನಾನು ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಅದೇ ರೀತಿ ಚಾಸಾ- 8 ರವರು ಹಣ ನೀಡದೆ ಇದ್ದರೆ ನಾನು ಕೊಡುತ್ತೇನೆಂದು 1ನೇ ಆರೋಪಿ ಹೇಳಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಊರಿಂದ ಆರೋಪಿತರ ಊರು ಸುಮಾರು ಒಂದು ಕಿಮಿ ದೂರ ಇದೆ. ನಮ್ಮ ಊರಿಂದ ಮುಡುಕುತೆರೆ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ 3 ಕಿಮಿ ದೂರ ಇದೆ. ನಮ್ಮ ಊರಿನಲ್ಲಿ ಸುಮಾರು 40 – 50 ಮನೆಗಳು ಇವೆ. ಲಿಂಗಾಯಿತ ಮತ್ತು ನಮ್ಮ ಜನಾಂಗದವರು ಇದ್ದಾರೆ. ನಮ್ಮ ವ್ಯವಹಾರಕ್ಕೆ ಅವರು ಒಳಗೊಳ್ಳುತ್ತಾರೆ ಅವರ ವ್ಯವಹಾರಕ್ಕೆ ನಾವು ಒಳಗೊಂಡು ಅನ್ಯೋನ್ಯವಾಗಿ ಇದ್ದೇವೆ. ಅವರ ಕೆಲಸ ಕಾರ್ಯಗಳಿಗೆ ನಾವು ಹೋಗುತ್ತೇವೆ ಎಂದರೆ ಸರಿ. ನಮ್ಮ ಕೆಲಸ ಕಾರ್ಯಗಳಿಗೆ ಅವರು ಬರುತ್ತಾರೆ ಎಂದರೆ ಸರಿಯಲ್ಲ.

7. ನಾನು ಒಂದು ವರ್ಷ ಆಟೋ ಚಲಾಯಿಸಿರುತ್ತೇನೆ. ಆಟೋ ನನ್ನ ಹೆಸರಿನಲ್ಲಿ ಇತ್ತು. ಈ ಪ್ರಕರಣದಲ್ಲಿ ಒಳಗೊಂಡಿದೆ ಎನ್ನುವ ದ್ವಿಚಕ್ರ ವಾಹನ ನನ್ನ ಹೆಸರಿನಲ್ಲಿ ಇರುವುದಿಲ್ಲ. ಚಾಸಾ- 8 ನಮ್ಮ ಊರಿನವರು. ಅವರು ಆಟೋ ಚಾಲಕರಾಗಿದ್ದರು. ಅವರ ಆಟೋವನ್ನು ಫೈನಾನ್ಸ್ ಗೆ ಹಣ ಕಟ್ಟಿಲ್ಲ ಎಂದು ವಶಪಡಿಸಿಕೊಂಡು ಹೋಗಿದ್ದರು. ಆದಕಾರಣ ಅವರು 1ನೇ ಆರೋಪಿಯ ಆಟೋವನ್ನು ಚಲಾಯಿಸುತ್ತಿದ್ದರು. ನಾನು ಡಿ.ಎಸ್.ಎಸ್ ಸಂಘಟನೆಯಲ್ಲಿ ಕಳೆದ ಒಂದು ವರ್ಷದಿಂದ ಸದಸ್ಯನಾಗಿದ್ದೇನೆ. ಬೆಳ್ಳಗೆರೆಯ ಗುಣವತಿ ಎನ್ನುವವರು ಸಹಾ ಡಿ.ಎಸ್.ಎಸ್ ಸಂಘಟನೆಯ ಸದಸ್ಯರು. ಸದರಿ ಗುಣವತಿ ನಮ್ಮ ಜನಾಂಗದವರು. ಅವರು ನನಗೆ ಈ ಘಟನೆ ನಡೆದಿದೆ ಎನ್ನುವ ಒಂದೆರಡು ತಿಂಗಳ ಹಿಂದಿನಿಂದ ಪರಿಚಯ ಇದೆ. ಸದರಿ ಗುಣವತಿ 1ನೇ ಆರೋಪಿ ಮತ್ತು ಅವರ ಕುಟುಂಬದವರ ವಿರುದ್ಧ ಎಸ್ ಎಸ್ಸಿ ಕಾಯ್ದೆ ಅಡಿ ದೂರು ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಡಿ.ಎಸ್.ಎಸ್ ಸಂಘಟನೆಯ

ಮೀಟಿಂಗ್ ಗಳಿಗೆ ಗುಣವತಿ ಭಾಗವಹಿಸುತ್ತಾರೆ. ಗುಣವತಿ 1ನೇ ಆರೋಪಿಯ ವಿರುದ್ಧ ನೀಡಿದ ದೂರನಲ್ಲಿ ಅವರಿಗೆ ಸರ್ಕಾರದಿಂದ ಪರಿಹಾರದ ಹಣ ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಾಬ್ತು ನಮಗೆ ಸರ್ಕಾರದಿಂದ ನನ್ನ ತಾಯಿಗೆ ರೂ.50,000/- ನನಗೆ ರೂ.50,000/- ಪರಿಹಾರದ ಹಣ ಬಂದಿರುತ್ತದೆ. ಸದರಿ ಹಣ ನಮ್ಮ ತಾಯಿ ಮತ್ತು ನನ್ನ ಬ್ಯಾಂಕ್ ಖಾತೆಗೆ ಬಂದಿರುತ್ತದೆ. ನನ್ನ ತಾಯಿಗೆ ರೂ.50,000/- ಪರಿಹಾರದ ಹಣ ಬಂದಿರುವ ಬಗ್ಗೆ ಅವರಿಗೆ ಗೊತ್ತಿದೆ.

8. ನಾನು ಸಂಘಟನೆಯ ಸದಸ್ಯನಾಗಿರುವುದರಿಂದ ಸಂಘಟನೆಯ ಇತರೆ ಸದಸ್ಯರ ಮನೆಗೆ ಹೋಗಿ ಬರುತ್ತೇನೆ ಎಂದರೆ ಸರಿಯಲ್ಲ. ಗುಣವತಿರವರ ಅಣ್ಣನ ಮನೆಗೆ ಹೋಗಿರುತ್ತೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳಿರುತ್ತೇನೆ ಹೊರತು ನಾನು ಬೇರೆ ಎಲ್ಲಿಯೂ ಹೇಳಿರುವುದಿಲ್ಲ. ನಮ್ಮ ಮನೆಯ ಬಾಗಿಲು ಮುರಿದಿರುವುದು, ಟಿವಿ, ಮನೆ ಪಾತ್ರೆ ಸಾಮಾನುಗಳು ಮತ್ತು ದ್ವಿಚಕ್ರ ವಾಹನ ನಾಶ ಮಾಡಿರುವುದು ಪೋಲೀಸರಿಗೆ ತೋರಿಸಿರುತ್ತೇನೆ ಅವುಗಳನ್ನು ಪೋಲೀಸರು ವಶಪಡಿಸಿಕೊಂಡು ಹೋಗಿರುವುದಿಲ್ಲ. ಮುರಿದ ವಸ್ತುಗಳನ್ನು ನಾನು ಪೋಲೀಸರಿಗೆ ನೀಡಿರುವುದಿಲ್ಲ.

9. ನಮ್ಮ ಮನೆಯ ಹಿಂದೆ ಮೂರು ಮನೆಗಳು ಇವೆ. ನಮ್ಮ ಮನೆಯ ಎದುರು ಒಂದು ಮನೆ, ಬಲಭಾಗದಲ್ಲಿ ಒಂದು ಮನೆ ಇದೆ. ನಮ್ಮ ಮನೆಯ ಒಳಗೆ ಕೂಗಾಡಿದರೆ ಕಿರುಚಾಡಿದರೆ ಅಕ್ಕಪಕ್ಕದ ಮನೆಗೆ ಕೇಳಿಸುತ್ತದೆ.

10. ಆರೋಪಿತರು ನನಗೆ ಹಾಗೂ ಚಾಸಾ.1 ರವರಿಗೆ ಮಾದಿಗ ಸೂಳೇಮಕ್ಕಳಾ, ಲೋಫರ್ ಮುಂಡೆ ಎಂದು ಅವ್ಯಾಚ ಶಬ್ಧಗಳಿಂದ ಜಾತಿ ನಿಂದನೆ ಮಾಡಿದರು, ನಂತರ ಆರೋಪಿತರು ಕಬ್ಬಿಣದ ರಾಡು ಹಾಗೂ ದೊಣ್ಣೆಯನ್ನು ಹಿಡಿದುಕೊಂಡು ಬಂದು ನನ್ನ ಸ್ನೇಹಿತ ಅಭಿಷೇಕ್ ಚಾಸಾ.9 ರವರ ಹೊಂಡಾ ದ್ವಿಚಕ್ರ ವಾಹನ ಸಂಖ್ಯೆ ಕೆಎ-41-ಇಸಿ-0981ಕ್ಕೆ ಹೊಡೆದು ಜಖಂಗೊಳಿಸಿದರು, ಈ ದಿನ ನಿಮ್ಮನ್ನು ಬಿಡುವುದಿಲ್ಲ ಸಾಯಿಸಿ ಬಿಡುತ್ತೇವೆಂದು ಪೆಟ್ರೋಲ್ ಹಾಕಿ ಸುಟ್ಟು ಬಿಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಚಾಸಾ.3 ಹಾಗೂ 4 ರವರು ಘಟನೆ ನಡೆದಿದೆ ಎನ್ನಲಾದ ನಂತರ ಸ್ಥಳಕ್ಕೆ ಬಂದಿರುತ್ತಾರೆ. ಘಟನೆ ನಡೆದಿದೆ ಎನ್ನುವ ನಂತರ ನಾನು ಪೋಲೀಸರಿಗೆ ಫೋನ್ ಮಾಡಿದಾಗ ಇಬ್ಬರು ಪೋಲೀಸರು ಅಲ್ಲಿಗೆ ಬಂದಿರುತ್ತಾರೆ. ಅದೇ ದಿನ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ದೂರನ್ನು ನೀಡಿರುವುದಿಲ್ಲ. ನಮ್ಮ ದಲಿತ ಸಂಘಟನೆಯವರು ಜೊತೆ ಚರ್ಚೆ ಮಾಡಿ ದಿಃ27.08.2019 ರಂದು ರಾತ್ರಿ 9.00 ಗಂಟೆಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ದೂರು ಕೊಟ್ಟ ನಂತರ 4 – 5 ಜನ ಪೋಲೀಸರು ಬಂದಿದ್ದರು. ಆ ಸಮಯ ನಮ್ಮ ಊರಿನ ಅಕ್ಕಪಕ್ಕದ ಮನೆಯವರು ಸುಮಾರು 10 – 15 ಜನರು ಇದ್ದರು. ಎಂಒ–1 ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ತೋರಿಸಲು ಯಾವುದೇ ಗುರುತನ್ನು ಮಾಡಿರುವುದಿಲ್ಲ. ನಮ್ಮ ಊರು ಮತ್ತು ಸುತ್ತಮುತ್ತಲ ಊರಿನಲ್ಲಿ ಜಾಸ್ತಿ ನೀಲಗಿರಿ ಮರಗಳನ್ನು ಬೆಳೆಯುತ್ತಾರೆ. ಆರೋಪಿತರು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಮತ್ತು ಬೈದಿರುತ್ತಾರೆ ಎಂದು ಪರಿಹಾರದ ಹಣ ಪಡೆಯುವ ಸಲುವಾಗಿ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಎಂಒ–1 ದೊಣ್ಣೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಫೋಟೋಗಳನ್ನು ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಗುಣವತಿ ಎನ್ನುವವರು 1ನೇ ಆರೋಪಿಯ ವಿರುದ್ಧ ದೂರು ದಾಖಲಿಸಿದ್ದುಅದರಲ್ಲಿ 1ನೇ ಆರೋಪಿಗೆ ಜಾಮೀನು ಲಭಿಸಿದ ನಂತರ ಆರೋಪಿತರ ಮೇಲೆ ನಾನು ಈ ದೂರನ್ನು ನನ್ನ ತಾಯಿಯ ಮೂಲಕ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಗುಣವತಿಯ ಜೊತೆ 10 – 15 ವರ್ಷದ ಪರಿಚಯ ಇದೆ ಎಂದರೆ ಸರಿಯಲ್ಲ. ಆದಕಾರಣ ನನಗೆ ಅವರ ಎಲ್ಲಾ ವ್ಯವಹಾರಗಳು ಗೊತ್ತಿದೆ ಎಂದರೆ ಸರಿಯಲ್ಲ.

12. 1ನೇ ಆರೋಪಿ ಈ ಘಟನೆಯ 3 – 4 ವರ್ಷದ ಹಿಂದಿನಿಂದ ನನಗೆ ಪರಿಚಯ ಇದೆ. ಆತನ ವಿರುದ್ಧ ದಾಖಲಾಗಿರುವ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

13. 1ನೇ ಆರೋಪಿಗೆ ಗುಣವತಿ ಎನ್ನುವವರು ಹಣ ಕೊಡಬೇಕಾಗಿದ್ದರೂ ಸಹಾ ಗುಣವತಿಯ ಪರವಾಗಿ ನಾನು ನಿಂತು 1ನೇ ಆರೋಪಿಯೇ ಗುಣವತಿಗೆ ಹಣ ಕೊಡಬೇಕೆಂದು 1ನೇ ಆರೋಪಿಯ ಜೊತೆ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಹಣಕಾಸಿನ ವೈಷಮ್ಯ ಮತ್ತು ಗುಣವತಿ ಕೊಟ್ಟ ಪ್ರಕರಣದಲ್ಲಿ 1ನೇ ಆರೋಪಿಗೆ ಜಾಮೀನು ಲಭಿಸಿರುವ ವೈಷಮ್ಯದ ಮೇರೆಗೆ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನನ್ನ ತಾಯಿ ಮೂಲಕ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಕತೆ ಕಟ್ಟಿ ಸುಳ್ಳು ದೂರನ್ನು ದಾಖಲಿಸಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನುದಲಿತ ಸಂಘಟನೆಯ ಸದಸ್ಯನಾಗಿರುವ ಕಾರಣ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿ ಪರಿಹಾರದ ಹಣ ದೊರಕುತ್ತದೆ ಎಂದು ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**